ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ಜಲ್ಲಯನ್ನು ಏನುಮಾಡಿದ್ದಾರೆಂಬ ವಿಚಾರ ನನಗೆ ಗೊತ್ತಿದೆ. ಅದನ್ನು ಏತಕ್ಕೂ ಉಪಯೋಗಿಸಿಲ್ಲ. ಆದರೆ ತಾವೀಗ ನನಗೆ ಹೇಳುತ್ತಿರುವ ಉತ್ತರ ತಮಗೆ ತಮ್ಮ ಕ್ಲರ್ಕಳಿಗಿನ ಅಧಿಕಾರಿಗಳು ಏನು ಬರೆದುಕಳುಹಿಸಿದ್ದಾರೋ ಅದನ್ನು ತಾನೆ ತಾವೀಗ ಹೇಳುತ್ತಿರುವುದು !

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಏತಕ್ಕೆ ಉಪಯೋಗ ಮಾಡಿದ್ದಾರೆಂಬ ವಿವರಗಳು ನನಗೆ ತಿಳಿಯದು. ಅಂತು ಅದನ್ನು ಕೆಲಸಕ್ಕೆ ಉಪಯೋಗ ಮಾಡಿದ್ದಾರೆಂಬುದು ಗೊತ್ತಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಾನು ಈ ಒಂದು ಪ್ರಶ್ನೆಯನ್ನು ಈ ಸಭೆಯ ಕಾರ್ಯಕಲಾಪಗಳಲ್ಲಿ ಸೇರಿಸತಕ್ಕ ಬಗ್ಗೆ ಕಳುಹಿಸಿದ್ದರ ಮೇರೆ ತಾವು ಅದನ್ನು ಅವರಿಗೆ ವಿವರಗಳನ್ನೊದಗಿಸುವುದಕ್ಕಾಗಿ ಕಳುಹಿಸಿದ್ದರ ಮೇರೆ ಅವರು ಅವರ ರಿಜಿಸ್ತರುಗಳಲ್ಲಿರತಕ್ಕ ಅಂಕೀ ಅಂಶಗಳ ಆಧಾರದ ಮೇರೆ ತಮಗೊಂದು ಸಮಜಾಯಿಷಿ ಬರೆದುಕಳುಹಿಸಿದ್ದರ ಮೇರೆಗೆ ತಾವೀಗ ಉತ್ತರ ಕೊಡುತ್ತಿದ್ದೀರೆಂದರೆ ತಾವು ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹೆಚ್ಚಿನ ವಿವರಗಳು ತಿಳಿಯದು. ಅಂತೂ 5,831 ಘನ ಗಜ ಉಳಿದಿವೆಯೆಂದು ತಿಳಿದುಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ದಿವಸ ಅಲ್ಲಿ ಯಾವ ಜಲ್ಲಿ ಉಳಿದಿರುತ್ತೆಂದು ತಮಗೆ ಅವರು ತಿಳಿಸಿದ್ದಾರೋ ಅದು ಅಲ್ಲೆಲ್ಲಾ ಚಿಲ್ಲಾಪಲ್ಲಿಯಾಗಿ ಬದ್ದು ಹೋಗಿದೆ, ಅಲ್ಲಿ ಯಾವ ಜಲ್ಲಿಯೂ ಇಲ್ಲ ಎಂಬುದನ್ನು ಸರಿಯಾಗಿ ತಾವು ಕಣ್ಣುಬಿಟ್ಟು ನೋಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಣ್ಣುಬಿಟ್ಟು ನೋಡಿಯೇ ಅವರೂ ವರದಿ ಮಾಡಿರುವುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—1948 ರಿಂದ ಆಚೆಗೆ ಅಳತೆಮಾಡಿದ ವರದಿ ತಮಗೆ ಬಂದಿದೆಯೋ ಅಥವಾ ಅದಕ್ಕಿಂತಲೂ ಈಚೆಗೆ ಅಳತೆಮಾಡಿದ ವಿವರಗಳು ತಮ್ಮಲ್ಲಿರುತ್ತವೆಯೋ !

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ ಅಳತೆ ಮಾಡಿ ವರದಿ ಕಳುಹಿಸಿದ್ದಾರೆ.

9 A.M.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ದಾರಿಯಲ್ಲಿ ಈಗ ಹೋಗಿ ನೋಡಿದರೆ, ಅಲ್ಲಿ ಜಲ್ಲಿ ಯಾವ ರೀತಿ ಇದೆ, ಚಿಲ್ಲಾಪಲ್ಲಿ ಹಾಗಿದೆಯೋ ಅಥವಾ ಸರಿಯಾಗಿದೆಯೋ ಎಂಬುದು ಗೊತ್ತಾಗುತ್ತಿತ್ತು. ಅಳತೆ ಮಾಡುವುದಕ್ಕೆ ಕೂಡ ಸಾಧ್ಯವಿಲ್ಲ. ಆದ್ದರಿಂದ, ಪುಸ್ತಕದಲ್ಲಿರತಕ್ಕ ಅಂಕಿ ಅಂಶಗಳನ್ನು ಓದಗಿಸಿದ್ದರೆ ಎಷ್ಟು Waste ಆಗಿದೆಯೆಂಬುದು ತಿಳಿಯುತ್ತಿತ್ತು. ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಪ್ರಶ್ನೆ ಕಳುಹಿಸಿದ್ದು.

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಿಸುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಲ್ಲಿ ತಾವು ಲೆಕ್ಕ ಹಾಕಿ 46,537 ಘನ ಗಜಗಳಷ್ಟು ಖರ್ಚಾಗಿದೆಯೆಂದು ಹೇಳಿದ್ದೀರಿ. ಎಲ್ಲಿಯವರೆಗೆ ಇಷ್ಟು ಖರ್ಚಾಗಿದ್ದುದು ?

ಶ್ರೀ ಕಡದಾಳ್ ಮಂಜಪ್ಪ.—52,368 ಘನ ಗಜಗಳಿದ್ದುದರಲ್ಲಿ 1948ನೆಯ ಇಸವಿಯಿಂದೀಚೆಗೆ ಖರ್ಚಾಗಿರುವುದು 46,537 ಘನ ಗಜಗಳು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—46,537 ಘನ ಗಜಗಳು ಖರ್ಚಾದ ಮೇರೆ ಉಳಿದ ಜಲ್ಲಿಯನ್ನು ಅಲ್ಲೇಕೆ ಇಟ್ಟಿದ್ದೀರಿ

ಶ್ರೀ ಕಡಿದಾಳ್ ಮಂಜಪ್ಪ.—ರಸ್ತೆಯ ಉಪಯೋಗಕ್ಕೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಿಮೆಂಟ್ ಕಾಂಕ್ರೀಟ್ ಮಾಡುವ ಯೋಚನೆಯೇ ಇಲ್ಲದಿರುವಾಗ ಆ ಜಲ್ಲಿ ಅಲ್ಲೆಲ್ಲಿಕರಿಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಕ್ರಮೇಣ ಎರ್ನಾಡಿಸ್ಟಿಕ್ಟ್ ಹೆಡ್‌ಕ್ವಾರ್ಟರುಗಳಿಂದಲೂ ಬೆಂಗಳೂರಿಗೆ ಬರತಕ್ಕ ರಸ್ತೆಗಳನ್ನು ಸಿಮೆಂಟ್ ಕಾಂಕ್ರೀಟ್ ಮಾಡಬೇಕೆಂದಿದ್ದೇವೆ. ಅದಕ್ಕೆ ಉಪಯೋಗಿಸುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗಿರುವ ಆಸ್ ಫಾರ್ಟ್ ರಸ್ತೆಯನ್ನು ಕಿತ್ತುಹಾಕಿ ಅದನ್ನು ಕಾಂಕ್ರೀಟ್ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಇಲ್ಲ. ಚೆನ್ನಾಗಿದ್ದರೆ ಕಿತ್ತುಹಾಕುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗಾದರೆ, ಈಗ ಆದರೂ ಅದನ್ನು ಬೇರೆ ಕಡೆಗೆ ವರ್ಗಾಯಿಸಿ ಉಪಯೋಗ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲಿ, ಮಾಡಿಸೋಣ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಜಲ್ಲಿಯನ್ನು ಖಾಸಗಿ ಜನರು ಯಾರೂ ಉಪಯೋಗಿಸಿಕೊಂಡಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಉಪಯೋಗಿಸಿಕೊಂಡಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಜಲ್ಲಿಯನ್ನು ತಿರುಗಿ ಖರ್ಚು ಮಾಡುವಾಗ ಅಳತೆಮಾಡಿಸಿ ಉಪಯೋಗಮಾಡುವುದಕ್ಕೆ ಪ್ರಾರಂಭಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅಳತೆ ಮಾಡಿಸುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—Curb Stones ಅಲ್ಲಲ್ಲಿ ಕೂಡಿಹಾಕಿದ್ದರಲ್ಲಿ ಶೇಕಡ 75 ಭಾಗ ಗೈರ್‌ವಿಲೆಯಾಗಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಕಡದಾಳ್ ಮಂಜಪ್ಪ.—ಗೊತ್ತಿಲ್ಲ.

Water Supply to Devanahalli.

Q.—419. Sri R. MUNISWAMIAH (Bangalore North—Scheduled Castes).—

Will the Government be pleased to state :—

(*a*) the estimated amount for sinking wells in the Devanahalli Town for providing tap water in the town ;

(*b*) the amount of loan granted to Devanahalli Municipality for purposes of supplying drinking water ?

A.—Sri KADIDAL MANJAPPA (Minister for Revenue and Public Works).—

(*a*) Rs. 1,25,000.

(*b*) The question is under consideration.

ಶ್ರೀ ಆರ್. ಮುನಿಶ್ಯಾಮಯ್ಯ.—ಈ ಎಸ್ಟಿಮೇಟ್ ತಯಾರಾಗಿ ಎಷ್ಟು ದಿನಗಳಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಫೆಬ್ರವರಿ ತಿಂಗಳಲ್ಲಿ ಮಾಡಲಾಯಿತು.

ಶ್ರೀ ಆರ್. ಮುನಿಸ್ವಾಮಯ್ಯ.—ಇದರಲ್ಲಿ ಬಾವಿಗಳಿಗೆಷ್ಟು ಹಣ ಖರ್ಚಾಗುತ್ತದೆಂದು ಹೇಳಿದ್ದಾರೆ, ಕೊಳವಾಯಿಗಳಿಗೆಷ್ಟು ಖರ್ಚಾಗುತ್ತದೆಂದು ಹೇಳಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರ ಈಗ ನನ್ನಲ್ಲಿಲ್ಲ. ಫೆಬ್ರವರಿ ತಿಂಗಳಲ್ಲಿ ತಾನೇ ಡೆಪ್ಯುಟಿ ಕಮಿಷನರು ಎಸ್ಟಿಮೇಟ್ ಕಳುಹಿಸಿದ್ದಾರೆ.

ಶ್ರೀ ಆರ್. ಮುನಿಶ್ಯಾಮಯ್ಯ.—ಎಷ್ಟು ಬಾವಿಗಳನ್ನು ತೋಡಿಸುತ್ತಾರೆಂಬುದನ್ನು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟಿನ ವಿವರಗಳು ನನ್ನ ಹತ್ತಿರ ಇಲ್ಲ.

Bidarahalli Reservoir across Kapini.

Q.—454. Sri. H. K. SHIVARUDRAPPA (Gundlupet—Heggaddevankote).—

Will the Government be pleased to state :—

(*a*) the names of villages, survey numbers and the total area of land that will be submerged by the proposed construction of an anicut near Bidarahalli in Heggaddevankote Taluk ;

(*b*) the relief that has been afforded by Government to the people that will be affected adversely by such submersion ; if so, the details may be given ;

(*c*) the survey numbers and their total extent that will come under wet cultivation in that taluk by the construction of the said anicut (villagewar) ;

(*d*) the amount spent on this work during the year 1952-53 ;

(*e*) the stage at which this work is at present ?

A.—Sri KADIDAL MANJAPPA (Minister for Revenue and Public Works).—

(*a*) There is no proposal for the construction of an Anicut. Bidarahally is the site of the proposed Reservoir across the Kapini river. A statement showing the details is appended below

(*b*) Only the preliminary survey works are in progress and hence the question does not arise now.

(*c*) The villagewar atchkats are not yet finalised. About 6,000 acres will be irrigated.

(d) A sum of Rs. 19,978 has been spent up to end of January 1953 on survey charges and establishment.

(*e*) The construction work is not yet taken up as the final surveys are going on.